ವನಸ್ಪತಿ

# ಚೆರ್‍ರಿ ಬೆಳೆಯುತ್ತೀರಾ?

ಚಿತ್ರ ಬರಹ: ಎಲ್.ಸಿ. ಚನ್ನರಾಜ್

ಸುಮಾರು 30 ವರ್ಷಗಳ ಹಿಂದೆ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದಾಗ ಚೆರ್‍ರಿಗಿಡಗಳನ್ನು ಸ್ಕೂಲಿನ ಕೈತೋಟದಲ್ಲಿ ನೋಡಿದ್ದೆ. ಗೊಂಚಲು ಹಣ್ಣುಗಳನ್ನು ನೋಡಿ ನಾನೂ ತೋಟದಲ್ಲಿ ಬೆಳೆಸಬೇಕು ಎಂಬ ಆಸೆ ಚಿಗುರೊಡೆದಿತ್ತು. ಈಗಿನ ಹಾಗೆ ಆಗ ನರ್ಸರಿಗಳು ಹೆಚ್ಚಾಗಿರಲಿಲ್ಲ. ಚೆರ್‍ರಿ ಗಿಡಗಳ ಬುಡದಲ್ಲಿ ಕತ್ತರಿಸಿದ ರೆಂಬೆಗಳನ್ನು ನೆಟ್ಟು ನೋಡಿದೆ, ಆದರೆ ಚಿಗುರಲಿಲ್ಲ. ಹಣ್ಣುಗಳನ್ನು ಬಿತ್ತಿ ನೋಡಿದೆ, ಅದೂ ಮೊಳಕೆ ಬರಲಿಲ್ಲ. ಎಷ್ಟೋ ವರ್ಷಗಳ ನಂತರ ಗೊತ್ತಾದದ್ದು– ಎಲ್ಲೋ ಅಪರೂಪಕ್ಕೆ ನೂರು ಹಣ್ಣುಗಳಲ್ಲಿ ಒಂದು ಮಾತ್ರ ಮೊಳಕೆ ಬರುತ್ತದೆ ಎಂದು! ಹೈಸ್ಕೂಲು, ಪಿಯುಸಿ ಮುಗಿಸಿ ಬೆಂಗಳೂರಿಗೆ ಕಲಿಯಲು ಹೋದಾಗ ಚೆರ್‍ರಿ ಗಿಡಗಳು ಸಿಗುವ ನರ್ಸರಿ ಪತ್ತೆ ಮಾಡಲು ಯತ್ನಿಸಿದೆ. ಕೊನೆಗೆ ಲಾಲ್‌ಬಾಗ್ ಸಮೀಪದ ಸಿದ್ದಾಪುರದ ನರ್ಸರಿಯಲ್ಲಿ ಚೆರ್‍ರಿ ಗಿಡಗಳು ಸಿಕ್ಕವು. ಚೆರ್‍ರಿಯಲ್ಲಿ ವೈವಿಧ್ಯಮಯ ತಳಿಗಳಿದ್ದು, ಒಂದೊಂದು ತಳಿಯೂ ವಿಶಿಷ್ಟ ಗುಣಗಳನ್ನು ಹೊಂದಿದೆ. ಇಲ್ಲಿದೆ ಎರಡು ವಿಧಗಳ ಪರಿಚಯ.

## ಸೂರಿನಾಮ್ ಚೆರ್‍ರಿ

ಸೂರಿನಾಮ್ ಚೆರ್‍ರಿಯ ವೈಜ್ಞಾನಿಕ ಹೆಸರು ಯುಗೇನಿಯ ಯುನಿಪ್ಲೋರೋ. ನೆಟ್ಟ ಪ್ರಾರಂಭದಲ್ಲಿ ಚಿಗುರುವ ರೆಕ್ಕೆಗಳು ನಿಧಾನವಾಗಿ ದೊಡ್ಡದಾದ ರೆಂಬೆ–ಕೊಂಬೆಗಳಾಗಿ ರೂಪುಗೊಂಡು 15–20 ವರ್ಷಗಳಲ್ಲಿ ಸುಮಾರು 25 ಅಡಿಗಳಷ್ಟು ಎತ್ತರ ಬೆಳೆಯುತ್ತದೆ. ನೇರವಾಗಿ ಬೆಳೆಯದೆ ಗುಂಪಾದ ರೆಂಬೆಗಳು, ಪೊದೆಯಾಗಿ ಹರಡಿ ಬೆಳೆಯುತ್ತವೆ. ಗಿಡದ ಚಾಮರ ಬಿಚ್ಚಿದ ಕೊಡೆಯಂತಿರುತ್ತದೆ. ವರ್ಷದ ಎಲ್ಲಾ ಋತುಮಾನಗಳಲ್ಲೂ ಹಚ್ಚ ಹಸಿರಿನಿಂದ ಕೂಡಿರುತ್ತದೆ. ಎಲೆಗಳಿಗಿಂತ ಹೆಚ್ಚಾಗಿ ಶ್ವೇತ ವರ್ಣದ ಹೂ ಗುಚ್ಛಗಳು, ಹಸಿರು ಬಣ್ಣದ ಪೀಚು, ಬಲಿತ ಕಾಯಿಗಳು, ಅರೆಬರೆ ಹಣ್ಣಾದ ಕಿತ್ತಳೆ ಬಣ್ಣದ್ದು ಮತ್ತು ಕಡು ಕೆಂಪು ಬಣ್ಣದ ಮಾಗಿದ ಹಣ್ಣುಗಳು ತುಂಬಿರುತ್ತವೆ. ಒಂದೇ ಗಿಡದಲ್ಲಿ ಏಕಕಾಲದಲ್ಲಿ ಹಸಿರು, ಬಿಳಿ, ಕಿತ್ತಳೆ, ಕಡು ಕೆಂಪು ಬಣ್ಣಗಳಿರುತ್ತವೆ.

ನಾಲ್ಕೈದು ಜಾತಿಯ ಜೇನ್ನೊಣಗಳು ಹೂಗಳ ಮಕರಂದ ಹೀರಲು ಬೆಳಿಗ್ಗೆಯೇ ಮುತ್ತಿಗೆ ಹಾಕುತ್ತವೆ. ಮಾಗಿದ ಹಣ್ಣುಗಳನ್ನು ತಿನ್ನಲು ವಿಶೇಷವಾಗಿ ಕೋಗಿಲೆ, ಹಸಿರು ಸೊಪ್ಪು ಕುಟುರುಗಳು ಬರುತ್ತವೆ. ಕೈತೋಟಗಳಲ್ಲಿ, ಮನೆಗಳ ಅಕ್ಕ ಪಕ್ಕ ಹಾಗೂ ಕುಂಡಗಳಲ್ಲಿ ಬೆಳೆಸಬಹುದು. ವರ್ಷಕ್ಕೆ 2 ರಿಂದ 3 ಸಾರಿ ಕತ್ತರಿಸಿ ಕುಬ್ಜ ಗಿಡಗಳನ್ನಾಗಿ ಬೆಳೆಸಲು ಸೂಕ್ತ. ಉದುರಿದ ಹಣ್ಣುಗಳೆಲ್ಲಾ ಮೊಳೆಯುವ ಪ್ರಚಂಡ ಚೈತನ್ಯವಿದೆ.

## ಬಾರ್ಬಡಾಸ್ ಚೆರ್‍ರಿ

ಬಾರ್ಬಡಾಸ್ ಚೆರ್‍ರಿಯ ವೈಜ್ಞಾನಿಕ ಹೆಸರು ಮಾಲ್ಪಿಘೀಯ ಗ್ಲಾಬ್ರ. ಮಾಲ್ಪಿಘೀಮ ಎನ್ನುವುದು ಇಟಲಿ ದೇಶದ ಪರಿಸರ ವಿಜ್ಞಾನಿಯೊಬ್ಬನ ಹೆಸರು. ಗಿಡದ ಎಲೆಗಳು, ಹಣ್ಣುಗಳು ಹೊಳಪಾಗಿ ಪಳಪಳ ಹೊಳೆಯುವುದರಿಂದ ಲ್ಯಾಟಿನ್ ಭಾಷೆಯಲ್ಲಿ ಗ್ಲಾಬ್ರ ಎಂಬ ಹೆಸರು ಬಂದಿದೆ. ಈ ಗಿಡದ ಬಲಿತ ಕಾಂಡ ರೆಂಬೆಗಳು ಬಲಿಷ್ಠವಾಗಿ ಗಟ್ಟಿಯಾಗಿರುತ್ತವೆ. ಸುಮಾರು ಹತ್ತು ಹನ್ನೆರಡು ವರ್ಷಗಳಲ್ಲಿ 10 ರಿಂದ 15 ಅಡಿಗಳಷ್ಟು ಎತ್ತರ ಬೆಳೆಯುತ್ತದೆ.

ಜನವರಿಯಿಂದ ಮೇವರೆಗೆ ಮೌನವಾಗಿರುವ ಚೆರ್‍ರಿ ಮುಂಗಾರು ಪೂರ್ವದ ರೇವತಿ, ಆಶ್ವಿನಿ ಮಳೆಗಳಿಗೆ ನಿದ್ದೆಯಿಂದ ಎಚ್ಚರಗೊಂಡು ಗೊಂಚಲು ಗೊಂಚಲು ಹೂಗಳನ್ನು ಬಿಡುತ್ತದೆ. ಕಾಯಿ ಹಣ್ಣುಗಳು ಪ್ರಾರಂಭವಾಗುತ್ತವೆ. ಇದರ ಬೀಜಗಳು ಮೊಳೆಯುವುದು ತುಂಬಾ ಅಪರೂಪ. ರಾಶಿ ರಾಶಿ ಹಣ್ಣುಗಳು ಗಿಡದ ಸುತ್ತಾ ಬಿದ್ದರೂ ಒಂದೂ ಮೊಳೆಯುವುದಿಲ್ಲ. ಮಾಗಿ ಕಾಲದ ಡಿಸೆಂಬರ್‌ವರೆಗೆ ಹೂ ಹಣ್ಣುಗಳನ್ನು ಬಿಡುತ್ತಾ ಮತ್ತೆ ಮೌನವಾಗುತ್ತವೆ. ಹಣ್ಣುಗಳಲ್ಲಿ ವಿಟಮಿನ್ 'ಸಿ' ಪೋಷಕಾಂಶ ಸಮೃದ್ಧವಾಗಿದೆ. ಪಿತ್ತಕೋಶದ ಆರೋಗ್ಯ ತೊಂದರೆಗಳು ಬರದಂತೆ ಮತ್ತು ಕಾಮಾಲೆ ಬರದಂತೆ ಇದು ತಡೆಯುತ್ತದೆ ಎಂದು ಆಯುರ್ವೇದ ಪಠ್ಯಗಳಲ್ಲಿದೆ.



ಬಾರ್ಬಡಾಸ್ ಚೆರ್‍ರಿ

